**ಸಾಕ್ಷಿಯನ್ನು ದಿನಾಂಕಃ 13.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ**

1 ನೇ ಪ್ರತಿವಾದಿಯ ತಂದೆ ಮರಿಲಿಂಗನಾಯಕರವರಿಗೆ ಸ.ನಂ. 653 ರಲ್ಲಿ ಒಟ್ಟು 03 ಎಕರೆ ಜಮೀನು ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ಹೇಳಿಕೆಯ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ ಸ.ನಂ. 653 ರಲ್ಲಿ ದಿನಾಂಕಃ 31.10.1974 ರಂದು 03 ಎಕರೆ ಜಮೀನು ಮಂಜೂರಾದ ಬಗ್ಗೆ ಹೇಳಿರುತ್ತಾರೆಂದರೆ ಸರಿ. ನಿ.ಪಿ.-28 ರಲ್ಲಿ ನ್ಯೂ ಸ.ನಂ. 570 ಎಂದು ನಮೂದಿಸಿದ್ದು, ಸದರಿ ಸ.ನಂ. ದುರಸ್ತ್ ಆದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ವಾದ ಪತ್ರದ ಚೆಕ್ ಬಂದಿಯಲ್ಲಿ ತೋರಿಸಿರುವಂತೆ ಪೂರ್ವ, ಪಶ್ಚಿಮ, ಉತ್ತರ ಮತ್ತು ದಕ್ಷಿಣ ದಿಕ್ಕಿಗೆ ತೋರಿಸಿರುವಂತಹ ಜಮೀನಿನ ಮಾಲೀಕರ ಹೆಸರು ನಿ.ಪಿ.-28 ರಲ್ಲಿ ಕಂಡು ಬರುತ್ತಿಲ್ಲ ಎಂದರೆ ಸರಿ. ಆದ್ದರಿಂದ ದಾವಾ ಆಸ್ತಿ ಎಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಹೇಗಾದರು ಮಾಡಿ ಪ್ರತಿವಾದಿಗಳ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಪ್ರತಿವಾದಿಗಳು ತೊಂದರೆ ಕೊಡುತ್ತಿದ್ದಾರೆಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಿ.ಪಿ.-26 ನ್ನು ಸಾಗುವಳಿ ಪತ್ರ ನೀಡುವಾಗ ನೀಡಿದ ನಕ್ಷೆ ಆಗಿರುವುದಿಲ್ಲವೆಂದರೆ ಸರಿ. ನಿ.ಪಿ.-26 ನ್ನು ತಯಾರಿಸಲು ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗೆ ಅರ್ಜಿ ನೀಡಿದ್ದೆವು. ಸದರಿ ಅರ್ಜಿಯನ್ನು ಹಾಜರುಪಡಿಸಿರುತ್ತೇನೆ. ನಿ.ಪಿ.-26 ರಲ್ಲಿ ವಾದಿ ನಾಗಮ್ಮರವರ ಹೆಸರಾಗಲೀ ಅಥವಾ ರಾಮಾಚಾರಿಯವರ ಹೆಸರಾಗಲೀ ಇರುವುದಿಲ್ಲ ಎಂದರೆ ಸರಿ. ನಿ.ಪಿ.-26 ರಲ್ಲಿ ಪೂರ್ವ ದಿಕ್ಕಿಗೆ 655 ಎಂದು ನಮೂದಿಸಿರುವ ಜಮೀನು ಶಿವುರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ನಾನು

ಹಾಜರುಪಡಿಸಿರುವ ನಿ.ಪಿ.-22 – ಪಹಣಿ ಪತ್ರಿಕೆಯಲ್ಲಿ ಶಿವುರವರ ಹೆಸರಾಗಲೀ ಅಥವಾ ವೀರಭದ್ರಪ್ಪರವರ ಹೆಸರಾಗಲೀ ಇರುವುದಿಲ್ಲವೆಂದರೆ ಸರಿ. ನಿ.ಪಿ.-26 ರಲ್ಲಿ ಪಶ್ಚಿಮಕ್ಕೆ ರಸ್ತೆ ಎಂದು ತೋರಿಸಿರುತ್ತಾರೆ. ವಾದ ಪತ್ರದ ಚೆಕ್ ಬಂದಿಯಲ್ಲಿ ಪಶ್ಚಿಮಕ್ಕೆ ಸುಂದ್ರಮ್ಮ – ತಿಮ್ಮನಾಯಕರವರ ಸ್ವತ್ತು ಎಂದು ಬರೆಸಿರುತ್ತೇನೆ. ವಾದ ಪತ್ರದಲ್ಲಿ ತೋರಿಸಿರುವ ಚೆಕ್ ಬಂದಿ ಸರಿಯಾಗಿರುತ್ತದೆ ಆದರೆ ನಿ.ಪಿ.-26 ರಲ್ಲಿ ಸರಿಯಾಗಿ ತೋರಿಸಿರುವುದಿಲ್ಲ. ಸುಂದ್ರಮ್ಮ – ತಿಮ್ಮನಾಯಕರವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಸುಂದ್ರಮ್ಮ – ತಿಮ್ಮನಾಯಕರವರಿಗೆ 1971-1972 ರಲ್ಲಿ ಸರ್ಕಾರದಿಂದ ಜಮೀನು ಮಂಜೂರಾಗಿರುತ್ತದೆ. ರಾಮಾಚಾರಿಯವರಿಗೆ ಮಂಜೂರಾದ ಸಮಯದಲ್ಲಿ ಸುಂದ್ರಮ್ಮ – ತಿಮ್ಮನಾಯಕರವರಿಗೆ ಜಮೀನು ಮಂಜೂರಾಗಿರುತ್ತದೆ. ನಿ.ಪಿ.-28 ರಲ್ಲಿ ಸುಂದ್ರಮ್ಮ – ತಿಮ್ಮನಾಯಕರವರ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ. 660 ಮತ್ತು ಸ.ನಂ. 571 ರ ಜಮೀನು ಯಾರಿಗೆ ಸೇರಿದ ಜಮೀನಾಗಿರುತ್ತದೆಂದು ನನಗೆ ಗೊತ್ತಿಲ್ಲ. ನಮ್ಮ ಜಮೀನು ಎಲ್ಲಿರುತ್ತದೆಂದು ಗುರುತಿಸಿಕೊಳ್ಳದೇ ಸುಳ್ಳು ಚೆಕ್ ಬಂದಿಯನ್ನು ನಮೂದಿಸಿ ಪ್ರತಿವಾದಿಗಳ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ವಾದಿ ನಾಗಮ್ಮರವರಿಗೆ ಒಟ್ಟು 06 ಜನ ಮಕ್ಕಳಿದ್ದು, ಅವರ ಪೈಕಿ ಒಬ್ಬ ಮಗ ಮೃತಪಟ್ಟಿರುತ್ತಾನೆ. ವಾದಿಯ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿ ದಾವೆ ಸಲ್ಲಿಸಿಲ್ಲ. ಮೃತ 1 ನೇ ಪ್ರತಿವಾದಿ ವಾದಿ ನಾಗಮ್ಮರವರ ವಿರುದ್ಧ ಸ.ನಂ. 653 ರಲ್ಲಿರುವ 03 ಎಕರೆ ಜಮೀನಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಮೃತ 1 ನೇ ಪ್ರತಿವಾದಿಯ ಪರವಾಗಿ ಡಿಕ್ರಿಯಾಗಿದ್ದು, ಸದರಿ ಡಿಕ್ರಿಯ ವಿರುದ್ಧ ಮೇಲ್ಮನವಿ

ಸಲ್ಲಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಿಗು ಮತ್ತು ದಾವಾ ಸ್ವತ್ತಿಗು ಯಾವುದೇ ಸಂಬಂಧವಿಲ್ಲದಿದ್ದರು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿ ಅವರ ಸ್ವಾಧೀನಕ್ಕೆ ತೊಂದರೆ ಕೊಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ. ಮೃತ 1 ನೇ ಪ್ರತಿವಾದಿಯ ವಾರಸುದಾರರು ಮೃತ 1 ನೇ ಪ್ರತಿವಾದಿಯ ಪರವಾಗಿ ಆದ ಡಿಕ್ರಿಯನ್ನು ನಾವು ಉಲ್ಲಂಘನೆ ಮಾಡಿರುತ್ತೇವೆಂದು ಅಮಲ್ಜಾರಿ ಅರ್ಜಿ ಸಂಖ್ಯೆ 3/2014 ರಂತೆ ಅರ್ಜಿ ಸಲ್ಲಿಸಿರುತ್ತಾರೆಂದರೆ ಸರಿ ಆದರೆ ನಾವು ಯಾವುದೇ ತೊಂದರೆ ಕೊಟ್ಟಿರುವುದಿಲ್ಲ. ವಾದಪತ್ರದಲ್ಲಿ ನಮೂದಿಸಿರುವ ಚೆಕ್ ಬಂದಿಯಲ್ಲಿ ನಾವು ಯಾವತ್ತೂ ಸ್ವಾಧೀನದಲ್ಲಿಲ್ಲ ಮತ್ತು ಪ್ರತಿವಾದಿಗಳ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಚೆಕ್ ಬಂದಿಯನ್ನು ನಮೂದಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**